**ಎಮ್ ವಿ ಸಿ ನಂಃ 1783/2023**
**ಆರ್.ಡಬ್ಲ್ಯೂಃ1,**

**ಸಾಕ್ಷಿಯನ್ನು ದಿನಾಂಕ : 30-01-2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ :- ಶ್ರೀ ಬಿ .ಎಸ್. ಕೆ . ಎದುರುದಾರ ಪರ ವಕೀಲರಿಂದ:**

ಸಾಕ್ಷಿದಾರನು ತನ್ನ ಸಾಕ್ಷಿ ಪ್ರಮಾಣ ಪತ್ರ ಹಾಜರುಪಡಿಸಿದ್ದು ಹಾಗೂ ಅದರಲ್ಲಿ ಇರುವ ತನ್ನ ಸಹಿಯನ್ನು ಗುರುತಿಸಿರುತ್ತಾರೆ. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ವಿಷಯಗಳು ನಿಜ ಇರುತ್ತವೆ.

ಸಾಕ್ಷಿಯು ಈ ದಿನ ಹಾಜರು ಪಡಿಸಿರುವ ದಾಖಲೆಗಳನ್ನು ಈ ಕೆಳಕಂಡಂತೆ ಗುರುತಿಸಲಾಯಿತು.

ನಿಆರ್ -1- ಅಧಿಕಾರ ಪತ್ರ

ನಿಆರ್ -2- ಪಾಲಸಿ ಕಾಪಿ ನಕಲು

ನಿಆರ್-3- ಎಮ್.ಎಲ್.ಸಿ. ಮಾಹಿತಿ ಪತ್ರ

ನಿಆರ್-4- ಅರ್ಜಿದಾರ ಬಸವರಾಜನ ಸಂಪೂರ್ಣ ಕೇಸ್ ಶೀಟ್

ಆದ್ದರಿಂದ ಅರ್ಜಿಯನ್ನು ವಜಾ ಮಾಡಲು ಕೋರಲಾಯಿತು.

**ಪಾಟಿ ಸವಾಲು: ಶ್ರೀ ವಿ.ಎಸ್. ಆರ್. ಅರ್ಜಿದಾರ ಪರ ವಕೀಲರಿಂದ :**

ಅಪಘಾತ ಆದ ದಿನದಂದು ಕೆ.ಎ.-32-ಇ.ಎ.-5717 ನಮ್ಮ ಬಳಿ ವಿಮೆ ಚಾಲ್ತಿ ಇತ್ತು . ಸದರಿ ವಿಮೆಯಲ್ಲಿ ಹಿಂಬದಿ ಸವಾರ ಒಳಪಟ್ಟಿರುತ್ತಾನೆ. ಸದರಿ ಪ್ರಕರಣದ ಪ್ರಕಾರ ಒಬ್ಬನೇ ಹಿಂಬದಿ ಸವಾರ ಇದ್ದಾನೆ ಎಂದರೆ ಸಾಕ್ಷಿ ತಪ್ಪಾಗಿ ನಮೂದಿಸಿರುತ್ತಾರೆ ಎಂದು ನುಡಿಯುತ್ತಾರೆ. ಪೋಲಿಸ ವರದಿ ಪ್ರಕಾರ ಅಪಘಾತವು ದಿ: 6-6-2023 ರಂದು ಆಗಿದೆ. ನಿಆರ್-3 ಎಮ್.ಎಲ್.ಸಿ. ಮಾಹಿತಿ ಅದೇ ದಿನ ಕಳುಹಿಸಲಾಗಿದೆ ಎಂದರೆ ಸರಿ ಸಾಕ್ಷಿ ಮುಂದುವರೆದು ಹಿಂಬದಿ ಸವಾರ ಅಂತಾ ನಿಆರ್.-3 ರಲ್ಲಿ ತಿಳಿಸಿಲ್ಲಾ ಎಂದು ನುಡಿಯುತ್ತಾರೆ. ನಿಆರ್-4 ಪ್ರಕಾರ ಅರ್ಜಿದಾರನಿಗೆ ತೆಲೆಗೆ ಪೆಟ್ಟಾಗಿ ತೆಲೆಯಲ್ಲಿ ಮೂಳೆ ಮುರಿತ

ಆಗಿದೆ ಎಂದರೆ ಸರಿ. ಸ್ಕಾನಿಂಗ್ ವರದಿ ಪ್ರಕಾರ c-5, c-6 spine cord fracture ಆಗಿದೆ ಎಂದರೆ ಸರಿ. ನಿಆರ್.-4 ರ ಪೇಜ್ ನಂ-72 ರಲ್ಲಿ Vertibra T1 , T5 ಆಗಿದೆ ಎಂದರೆ ಸರಿ. ಸದರಿ ಅರ್ಜಿದಾರನಿಗೆ ತೀವ್ರ ಸ್ವರೂಪದ ಗಾಯ ಆಗಿದ ಕಾರಣ ಆತನು ಸುಧಾರಿಸಿಕೊಂಡು ದೂರು ಕೊಡಲು ಪ್ರ.ವ. ವರದಿಯಲ್ಲಿ ತಿಳಿಸಲಾಗಿದೆ ಎಂದರೆ ಸರಿಯಲ್ಲ . ಹಿಂಬದಿ ಸವಾರ ಮೋಟಾರ ಸೈಕಲ ಮೇಲಿಂದ ಬಿದ್ದಾಗ ಸದರಿ ಮೋಟಾರ ಸೈಕಲಗೆ ಇದೇ ರೀತಿ ಜಖಂ ಆಗುತ್ತದೆ ಎಂದು ಯಾವುದೇ ನಿಯಾಮವಳಿ ಇಲ್ಲಾ ಎಂದರೆ ಸರಿಯಲ್ಲ. ನಾನು ಪ್ರತ್ಯಕ್ಷ ಸಾಕ್ಷಿ ಆಗದ ಕಾರ ಹಿಂಬದಿ ಸವಾರ ಆ ವೇಳೆಯಲ್ಲಿ ಹೆಲ್ಮಟ ಧರಿಸಿದ್ದಾನೋ ಇಲ್ಲಾ ಎಂದು ಸಾಕ್ಷಿ ನುಡಿಯಲು ಸಾಧ್ಯ ಇಲ್ಲಾ ಎಂದರೆ ಸಾಕ್ಷಿ ಪಂಚನಾಮೆಯಲ್ಲಿ ಮತ್ತು ಪೋಲಿಸ ವರದಿಯಲ್ಲಿ ತಿಳಿಸಿಲ್ಲಾ ಎಂದ ನುಡಿಯುತ್ತಾರೆ. ಈ ಪ್ರಕರಣದಲ್ಲಿ ನಮ್ಮ ಕಂಪನಿ ಖಾಸಗಿ ತನಿಖೆ ಮಾಡಿಲ್ಲಾ, ಪೋಲಿಸ ದಾಖಲೆಗಳನ್ನು ಸಂಗ್ರಹಿಸಿದ್ದೇವೆ. ನಾನು ಪೋಲಿಸ ದಾಖಲೆಗಳ ಪ್ರಕಾರ ಸಾಕ್ಷಿ ನುಡಿಯುತ್ತಿದ್ದೇನೆ. ಕೆ.ಎ.-32-ಇ.ಎ.-5717 ನೇದ್ದರ ಚಾಲಕನ ಮೇಲೆ ಅಂತಿಮ ವರದಿ ಸಲ್ಲಿಸಲಾಗಿದೆ ಎಂದರೆ ಸಾಕ್ಷಿ ತಪ್ಪು ಇದೆ ಎಂದು ನುಡಿಯುತ್ತಾರೆ. ಅಂತಿಮ ವರದಿಯಲ್ಲಿ ಬೈಕ ಸವಾರ ಮತ್ತು ಹಿಂಬದಿ ಸವಾರ ಮೋ.ಕಾಯ್ದೆ ಪ್ರಕಾರ ಹೆಲ್ಮಟ ಧರಿಸಿಲ್ಲಾ ಎಂದು ಯಾವುದೇ ಕಲಂ ಅಳವಡಿಸಿಲ್ಲಾ ಎಂದರೆ ಸರಿಯಲ್ಲ. ವಿಮೆ ಪ್ಯಾಕೇಜ ಪಾಲಸಿ ಇದ್ದ ಕಾರಣ ನಾವು ಪರಿಹಾರ ನೀಡಲು ಭಾಧ್ಯಸ್ಥರು ಎಂದರೆ ಸರಿಯಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ತಿಳಿಸಿದ ಎಲ್ಲಾ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸರಿ.ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಚಿತ್ತಾಪೂರ**